ವಿರುದ್ಧವೆಂಬಂತೆ ಗಹಗಹಿಸಿ ನಗತೊಡಗಿದರು. ಕಾನೂನು ಎಂಬ ಬಿದಿರನ್ನು ಬೇಕಾದ ಹಾಗೆ ಸಿಬಿರು ಸಿಬಿರುಗಳನ್ನಾಗಿ ಸೀಳಿ ನೋಡುವಲ್ಲಿ ಮೇಲಿನ ಅಧಿಕಾರಿಗಳು ಮಹಾಪರಿಣತರು ಎಂಬುದು ಡಾ. ಸತ್ಯಾರ್ಥಿ ಚಟರ್ಜಿ ಅವರಿಗೆ ತಿಳಿಯದ ವಿಷಯವೇನೂ ಆಗಿರಲಿಲ್ಲ. ಸಹಾಯ ಮಾಡುವ ಬದಲು, ಇಲ್ಲದ ಸಣ್ಣಪುಟ್ಟ ತಪ್ಪುಗಳನ್ನೇ ಹುಡುಕಿ ಕೊಕ್ಕೆ ಹಾಕುವ ತಮ್ಮ ಮೇಲಧಿಕಾರಿಗಳ ಅಧಿಕಾರಶಾಹಿ ಮನೋಭಾವಕ್ಕೆ ಜಿಗುಪ್ಸೆಗೊಂಡಿದ್ದ ಅವರಿಗೆ ಇಂಥ ಸೂಚನೆ ಅಚ್ಚರಿಯನ್ನೇನೂ ಹುಟ್ಟಿಸಲಿಲ್ಲ. ಈ ಸಲ ಸ್ಟೆನೋಗೆ ಡಿಕ್ಟೇಶನ್ ಕೊಡದೆ, ತಾವೇ ಪೆನ್ನು ಪೇಪರುಗಳನ್ನು ತೆಗೆದುಕೊಂಡು ಮಹಾನಿರ್ದೇಶನಾಲಯಕ್ಕೆ ಕಳಿಸಬೇಕಾದ ಪತ್ರದ ಡ್ರಾಫ್ಟನ್ನು ಕೈಯಿಂದ ಬರೆದು, ಟೈಪ್ ಮಾಡಲು ಅದನ್ನು ಸ್ಟೇನೋಳಿಗೆ ಕೊಟ್ಟರು.

★★★

ಮಾನ್ಯ ಮಹಾನಿರ್ದೇಶಕರ ಸನ್ನಿಧಿಗೆ, ಕಲ್ಕತ್ತಾ

ಆದರದ ನಮಸ್ಕಾರಗಳು.

ಗೌರವಾನ್ವಿತ ಲೆಕ್ಕಪರಿಶೋಧಕರು ದಿನಾಂಕ 18ರಂದು ನಮ್ಮ ಕಚೇರಿಗೆ ಸಲ್ಲಿಸಿದ ಲೆಕ್ಕಪತ್ರ ಪರಿಶೀಲನೆಯ ವರದಿಯಲ್ಲಿ ಎತ್ತಿರುವ ಆಕ್ಷೇಪಣೆಗೆ ಸಂಬಂಧಿಸಿದಂತೆ ನಮ್ಮ ಕಚೇರಿಯಿಂದ ಬರೆಯಲಾದ ದಿ. 20ರ ಪತ್ರಕ್ಕೆ ಮಹಾನಿರ್ದೇಶನಾಲಯವು ನೀಡಿದ ಆದೇಶ ಪತ್ರವು (ದಿ.3ರ ಪತ್ರ) ಬಂದು ತಲುಪಿದೆ. ತಮ್ಮ ಪತ್ರಕ್ಕೆ ಈ ಕೆಳಗಿನಂತೆ ವಿವರಣೆ ನೀಡಲಾಗುತ್ತಿದೆ.

ಮಹಾನಿರ್ದೇಶನಾಲಯವು ಆಕ್ಷೇಪಿಸಿದಂತೆ ಸದರಿ ಹುಲಿಗೆ ಕಲಾವಿದರಿಗೆ ಕೊಡಮಾಡುವ ಕಾಂಟ್ರ್ಯಾಕ್ಟನ್ನು ಕೊಟ್ಟಿಲ್ಲವೆಂಬುದು ಸತ್ಯ. ಕೇಂದ್ರವು ನಿರ್ಮಿಸುವ ಕಾರ್ಯಕ್ರಮಗಳಲ್ಲಿ ಕೆಲವೊಮ್ಮೆ ಗಣ್ಯಾತಿಗಣ್ಯ ಅತಿಥಿಗಳ ಭಾಗವಹಿಸುವಿಕೆಯ ಅಗತ್ಯವಿದ್ದು, ಅಂಥವರನ್ನು ಕಾರ್ಯಕ್ರಮಗಳಿಗಾಗಿ ಆಮಂತ್ರಿಸಿದಾಗ ಅವರಿಗೆ ಕಾಂಟ್ರ್ಯಾಕ್ಟ್ ಕೊಡದೆ, ಶಿಷ್ಟಾಚಾರಗಳ ಪ್ರಕಾರ ಚಹಾ–ಪಾನೀಯವನ್ನು ಒದಗಿಸಲು ಮ್ಯಾನ್ಯುವಲ್ ಪ್ರಕಾರವೇ ಅವಕಾಶವಿದೆ. ಹಾಗೆ ಕೊಡಮಾಡುವ ಚಹಾಪಾನೀಯದ ವೆಚ್ಚವನ್ನು ಎಂಟರ್‌ಟೇನ್‌ಮೆಂಟ್ ಸಬ್‌ಹೆಡ್‌ನ ಅಡಿಯಲ್ಲಿ ಭರಿಸಲೂ ಅವಕಾಶವಿದೆ. ಆಡಿಟ್ ಪಾರ್ಟಿಯು ಎತ್ತಿದ ಆಕ್ಷೇಪಣೆಯಲ್ಲಿ ನಮೂದಿಸಲಾಗಿರುವ ಹುಲಿಯೂ ಗಣ್ಯಾತಿಗಣ್ಯ ಅತಿಥಿಯಾಗಿದೆ ಎಂಬುದನ್ನು (ಏಕೆಂದರೆ, ಅದು ರಾಯಲ್ ಬೆಂಗಾಲ ಹುಲಿ. ಇದಕ್ಕೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ಲಗತ್ತಿಸಲಾಗಿದೆ) ತಮ್ಮ ಗಮನಕ್ಕೆ ತರಬಯಸುತ್ತೇನೆ. ಮತ್ತೂ ಒಂದು ಮಹತ್ವದ ವಿಷಯವೆಂದರೆ, ಬೆಂಗಾಲ ರಾಯಲ್ ಹುಲಿಯು ತಾನು ಕಾರ್ಯಕ್ರಮದಲ್ಲಿ ಭಾಗವಹಿಸಲು ಯಾವುದೇ ಕಾಂಟ್ರ್ಯಾಕ್ಟನ್ನಾಗಲಿ ಅಥವಾ ಸಂಭಾವನೆಯನ್ನಾಗಲಿ ಕೇಳಲಿಲ್ಲ.

ಕಾನೂನಿನ ಈ ಎಲ್ಲ ಉಪಕ್ರಮಗಳನ್ನು ಅತ್ಯಂತ ಎಚ್ಚರದಿಂದ ಅನುಸರಿಸಿಯೇ ಬೆಂಗಾಲ್ ರಾಯಲ್ ಹುಲಿಗೆ ಎರಡೂವರೆ ಆಣೆಯ ಮಾಂಸದ ತುಂಡನ್ನು ಕೊಡಲಾಗಿದೆ. ಹೀಗಿರುವಾಗ ಈ ಇಡೀ ಪ್ರಕ್ರಿಯೆಯಲ್ಲಿ ನಮ್ಮ ಕೇಂದ್ರವು ಯಾವುದೇ ಪ್ರಮಾದವನ್ನು ಎಸಗಿಲ್ಲವೆಂದೂ, ಪ್ರಮಾದವೇ ಆಗಿಲ್ಲದಿರುವಾಗ ಇದನ್ನು ಮಾಡಿದವರು ತಪ್ಪಿತಸ್ಥರಲ್ಲವೆಂದೂ, ತಪ್ಪಿತಸ್ಥರೇ ಆಗಿಲ್ಲದಿರುವಾಗ ಅವರಿಂದ ಹಣವನ್ನು ವಸೂಲು ಮಾಡಿ ಮೆಮೋ ಕೊಡುವ ಅಗತ್ಯವೇ ಇಲ್ಲವೆಂದೂ ಈ ಮೂಲಕ ಸ್ಪಷ್ಟೀಕರಣವನ್ನು ನೀಡಲಾಗುತ್ತಿದೆ.

ಮಹಾನಿರ್ದೇಶನಾಲಯವು ಮೇಲಿನ ಎಲ್ಲ ಸತ್ಯಾಂಶಗಳನ್ನು ಪರಿಶೀಲಿಸಿ, ತನ್ನ ಮೊದಲಿನ ಪತ್ರದಲ್ಲಿ ಕೊಟ್ಟಿರುವ ಆದೇಶವನ್ನು ಹಿಂತೆಗೆದುಕೊಳ್ಳಬೇಕೆಂದು ನಮ್ರವಾಗಿ ಕೋರುತ್ತೇನೆ.

ಗೌರವಾದರದ ನಮಸ್ಕಾರಗಳೊಂದಿಗೆ,

ಕೇಂದ್ರ ನಿರ್ದೇಶಕ